1	2	3	4	5	6	7
2.	ಇಟಗಿ–ಸಾಸಲವಾಡ ಏತ	427	800	1992	2001	2005
3.	ಬಸಾಪುರ ಏತ	455	936	1992	2001	2005
4.	ಗಂಡೋರಿನಾಲಾ	6600	13295	1993	2001	2006
5.	ಹಿರೇಹಳ್ಳ	635	17850	1977	1980	2004
6.	ಮುಲ್ಲಾಮಾರಿ ಕೆಳದಂಡೆ	4500	14836	1973	1982	2006
7.	ಮಸ್ಕಿನಾಲಾ	2357	4700	1976	1980	2004
8.	ಹರಿನಾಲಾ	2695	5556	1998	2002	2005
9.	ಅರ್ಕಾವತಿ *	2260		1975	1989	2005
10.	ಚಿಕ್ಲಿಹೊಳೆ *	340	1800	1978		2005
11.	ಹುಚ್ಚನಕೊಪ್ಪಲು *	690	2750	1991		2005
12.	ಇಗ್ಗಲೂರು *	1075	6965	1979	1990	2005
13.	ಕಾಮಸಮುದ್ರ *	630	2875	1985		2005
14.	ಮಂಚನಬೆಲೆ *	1850	7465	1970	1982	2005
15.	ತಾರಕ *	170	5100	1970		2005
16.	ಉಡುತೊರೆಹಳ್ಳ *	3230	15610	1978	1995	2005
17.	ವಾಟೆಹೊಳೆ *	205	5202	1977		2005
18.	ಚುಲ್ಕಿನಾಲಾ	380	15276	1976	1982	2004

*ಕಾವೇರಿ ಕೊಳ್ಳದ ಯೋಜನೆಗಳಾದುದರಿಂದ ಪೂರ್ಣಗೊಳ್ಳುವ ವರ್ಷ ಭಾಗಶ: ತೋರಿಸಿಲ್ಲ.

657(867) : ಶ್ರೀ ಬಸವರಾಜು ಎ.ಎಸ್. (ಅರಸೀಕೆರೆ) ಮಾನ್ಯ ಪೌರಾಡಳಿತ ಮತ್ತು ಕೆಯುಐಡಿಎಫ್‌ಸಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹಾಸನ ಜಿಲ್ಲೆಯಲ್ಲಿರುವ ಪುರಸಭೆ, ಪಟ್ಟಣ ಪಂಚಾಯಿತಿಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರ ಒದಗಿಸುವುದು)

ಆ) ಈ ಎಲ್ಲಾ ಪುರಸಭೆ, ಪಟ್ಟಣ ಪಂಚಾಯಿತಿಗಳ ಜನಸಂಖ್ಯೆ ಎಷ್ಟು ಹಾಗೂ ಇವುಗಳಿಂದ ಬರುವ ಆದಾಯವೆಷ್ಟು; (ವಿವರಗಳನ್ನು ಒದಗಿಸುವುದು)

ಇ) ಅರಸೀಕೆರೆ ತಾಲ್ಲೂಕು ಬಾಣಾವರವನ್ನು ಮೇಲ್ದರ್ಜೆಗೇರಿಸುವ ವಿಚಾರ ಸರ್ಕಾರದ ಮುಂದಿದೆಯೇ;

ಈ) ಅರಸೀಕೆರೆ ಬಾಣಾವರ ಹಾಗೂ ಇತರೆ ದೊಡ್ಡ ಪಟ್ಟಣಗಳಿಗೆ ಕುಡಿಯುವ ನೀರು ಹಾಗೂ ಇತರೆ ಮೂಲಭೂತ ಸೌಕರ್ಯಕ್ಕಾಗಿ ಕೈಗೊಂಡಿರುವ ಕ್ರಮಗಳೇನು;

ಉ) ಹೇಮಾವತಿಯಿಂದ ಇದಕ್ಕಾಗಿ ಎಷ್ಟು ಸಾಮರ್ಥ್ಯದ ನೀರನ್ನು ಹರಿಸಲಾಗುತ್ತಿದೆ.

ಊ) ಇದು ಎಷ್ಟು ಪಟ್ಟಣಗಳಿಗೆ ಅನುಕೂಲ ಕಲ್ಪಿಸಿದೆ (ವಿವರ ಒದಗಿಸುವುದು)?

ಶ್ರೀ ಎಸ್.ಆರ್. ಮೋರೆ (ಪೌರಾಡಳಿತ ಮತ್ತು ಕೆಯುಐಡಿಎಫ್‌ಸಿ ಸಚಿವರು)

ಅ) **ಪುರಸಭೆ–4**

ಅರಸೀಕೆರೆ, ಚನ್ನರಾಯಪಟ್ಟಣ, ಹೊಳೆನರಸೀಪುರ

ಪಟ್ಟಣ ಪಂಚಾಯಿತಿ–3

ಆಲೂರು, ಬೇಲೂರು, ಅರಕಲಗೂಡು

ಆ)

	2001ರ ಜನಗಣತಿ ಪ್ರಕಾರ ಜನಸಂಖ್ಯೆ	ಆದಾಯ (ಲಕ್ಷಗಳಲ್ಲಿ)
ಪುರಸಭೆ–4		
ಅರಸೀಕೆರೆ	45,166	360.060
ಚನ್ನರಾಯಪಟ್ಟಣ	34,515	322.190
ಹೊಳೆನರಸೀಪುರ	27,024	348.200
ಸಕಲೇಶಪುರ	23,176	320.022
ಪಟ್ಟಣ ಪಂಚಾಯಿತಿ–3		
ಆಲೂರು	6,133	51,910
ಬೇಲೂರು	20,228	265.477
ಅರಕಲಗೂಡು	15,169	129,630

ಇ) ಇಲ್ಲ.

ಈ) 1. ಬಾಣಾವರವು ಹಾಲಿ ಗ್ರಾಮ ಪಂಚಾಯಿತಿಯಾಗಿದ್ದು ಜಿಲ್ಲಾ ಪಂಚಾಯಿತಿ ಅಧೀನದಲ್ಲಿರುತ್ತದೆ.

2. ಅರಸೀಕೆರೆಗೆ ಸಂಬಂಧಿಸಿದಂತೆ ಈಗಾಗಲೇ ತಿಪಟೂರು ಬಳಿ ಇರುವ ಈಚನೂರು ಕೆರೆಯಿಂದ ಒಂದನೇ ಹಂತದ ಕುಡಿಯುವ ನೀರು ಸರಬರಾಜು ಕಾಮಗಾರಿಯನ್ನು ಪೂರೈಸಿ ಚಾಲನೆಗೊಳಿಸಿ ನೀರು ಸರಬರಾಜು ಮಾಡಲಾಗುತ್ತಿದೆ.

3. *ನಾಗತಿಹಳ್ಳಿ ಬಳಿ ಹಳೆಯ ನೀರು ಸರಬರಾಜು ಯೋಜನೆಯನ್ನು* ಪುನಶ್ಚೇತನಗೊಳಿಸಿ ನೀರು ಸರಬರಾಜು ಮಾಡಲಾಗುತ್ತಿದೆ.

4. ಪಟ್ಟಣದಲ್ಲಿ ಈಗಾಗಲೇ ಒಳಚರಂಡಿ ವ್ಯವಸ್ಥೆ ಹಾಗೂ ಇತರೆ ಮೂಲಭೂತ ಸೌಕರ್ಯಗಳು ಲಭ್ಯವಿದ್ದು ವಿವಿಧ ಅಭಿವೃದ್ಧಿ ಯೋಜನೆಗಳಡಿಯಲ್ಲಿ ಕೈಗೊಳ್ಳಲಾಗಿದೆ.

ಉ) ಹೇಮಾವತಿ ಬಲದಂಡೆ ಕಾಲುವೆಯಿಂದ ಪ್ರತಿ ವರ್ಷ ಜೂನ್–ಜುಲೈ–ಆಗಸ್ಟ್– ಡಿಸೆಂಬರ್–ಜನವರಿ–ಫೆಬ್ರವರಿ ತಿಂಗಳಲ್ಲಿ 2000 ಕ್ಯೂಸೆಕ್ಸ್‌ಗಳ ನೀರನ್ನು ಬಿಡಲಾಗುತ್ತಿದ್ದು ಇದರಿಂದ ಈಚನೂರು ಕೆರೆಯನ್ನು ತುಂಬಿಸಿ ನೀರು ಸರಬರಾಜು

ಮಾಡಲಾಗುತ್ತಿರುತ್ತದೆ. (ಈಚನೂರು ಕೆರೆಯ ಸಾಮರ್ಥ್ಯ 450 ಎಂ.ಜಿ)

ಊ) ಇದು ಅರಸೀಕೆರೆ, ತಿಪಟೂರು ಪಟ್ಟಣಗಳು ಮತ್ತು ತುಮಕೂರು ನಗರಕ್ಕೆ ನೀರು ಸರಬರಾಜು ವ್ಯವಸ್ಥೆ ಕಲ್ಪಿಸಿದೆ.

658(869) : ಶ್ರೀ ಎ.ಎಸ್. ಬಸವರಾಜು (ಅರಸೀಕೆರೆ) ಮಾನ್ಯ ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹಾಸನ ಜಿಲ್ಲೆಯಲ್ಲಿರುವ ಕೈಗಾರಿಕೆಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ಹಾಗೂ ಬೃಹತ್ ಹಾಗೂ ಸಣ್ಣ ಕೈಗಾರಿಕೆಗಳವಾರು ವಿವರ ಒದಗಿಸುವುದು)

ಆ) ಇವುಗಳಲ್ಲಿ ಲಾಭದಲ್ಲಿರುವ ಕೈಗಾರಿಕೆಗಳೆಷ್ಟು ಹಾಗೂ ನಷ್ಟದಲ್ಲಿರುವ ಕೈಗಾರಿಕೆಗಳೆಷ್ಟು;

ಇ) ನಷ್ಟದಲ್ಲಿರುವ ಕೈಗಾರಿಕೆಗಳ ಪುನ:ಶ್ಚೇತನಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಈ) ಸಣ್ಣ ಕೈಗಾರಿಕೆಗಳಿಗೆ ಸರ್ಕಾರದಿಂದ ಕೊಡುವ ಸಬ್ಸಿಡಿ (ಸಹಾಯಧನ) ಮಂಜೂರಾತಿಗಾಗಿ ಬಾಕಿ ಇರುವ ಪ್ರಕರಣಗಳೆಷ್ಟು ಹಾಗೂ ಎಷ್ಟು ಹಣ ಬಾಕಿ ಇದೆ;

ಉ) ಯಾವಾಗ ಮಂಜೂರು ಮಾಡಿ ಬಿಡುಗಡೆಗೊಳಿಸಲಾಗುವುದು;

ಊ) ವಿಳಂಭಕ್ಕೆ ಕಾರಣಗಳೇನು (ವಿವರ ಒದಗಿಸುವುದು)

ಋ) ಅರಸೀಕೆರೆ ತಾಲ್ಲೂಕಿನಲ್ಲಿರುವ ಸಣ್ಣ ಕೈಗಾರಿಕೆಗಳ ಸ್ಥಿತಿ-ಗತಿ ಬಗ್ಗೆ ಸಹಾಯ ಧನದ ಬಾಕಿ ಕುರಿತು ವಿವರಗಳನ್ನು ನೀಡುವುದು?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು)

ಅ) ದಿನಾಂಕ 31-3-2004ರ ಅಂತ್ಯಕ್ಕೆ ವಿವರಗಳು ಈ ಕೆಳಕಂಡಂತಿವೆ:

	ಪ್ರಮಾಣ	ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳು	ಸಣ್ಣ ಕೈಗಾರಿಕೆಗಳು
1.	ಆಲೂರು	–	519
2.	ಅರಕಲಗೂಡು	–	761
3.	ಅರಸೀಕೆರೆ	1	1,447
4.	ಬೇಲೂರು	–	765
5.	ಚನ್ನರಾಯಪಟ್ಟಣ	2	1,247
6.	ಹಾಸನ	9	2,274
7.	ಹೊಳೆನರಸೀಪುರ	–	869
8.	ಸಕಲೇಶಪುರ	–	970
	ಒಟ್ಟು	**12**	**8,852**